ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

**ಸುತ್ತೋಲೆ**

ಸಂಖ್ಯೆ: ನಾ ನೃ.ಸಂ.ವಿ.ಪ್ರ. ಕಲಾ ಉತ್ಸವ: 16-17 ದಿನಾಂಕ:06/09/20136

ವಿಷಯ : 2016-17ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ಶಿಕ್ಷಕರಿಗೆ ವಿಜ್ಞಾನ ವಸ್ತು ಪ್ರದರ್ಶನ ಆಯೋಜಿಸುವ ಬಗ್ಗೆ.

8/9/2016 1.30pm

ಉಲ್ಲೇಖ:-1) NCERT Guidelines 44th JNNSMEE- Children 2016-17

2) VITM Ltr VM 24(18) EDE EXT SISF 2017 Dtd:24 Aug 2016

*******

ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷದಂತೆ, 2016-17 ನೇ ಸಾಲಿನಲ್ಲಿಯೂ ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ವಿಜ್ಞಾನ ವಸ್ತುಪ್ರದರ್ಶನವನ್ನು ಎನ್.ಸಿ.ಇ.ಆರ್.ಟಿ. ಮತ್ತು ವಿ.ಐ.ಟಿ.ಎಂ ರವರ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ.

ರಾಜ್ಯದ 34 ಡಯಟ್‌ಗಳ ಪ್ರಾಂಶುಪಾಲರ ಉಸ್ತುವಾರಿ ಮತ್ತು ಮೇಲ್ವಿಚಾರಣೆಯಲ್ಲಿ 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಶಾಲಾ, ತಾಲ್ಲೂಕು ಹಾಗೂ ಜಿಲ್ಲಾ ಹಂತದ ವಿಜ್ಞಾನ ವಸ್ತುಪ್ರದರ್ಶನವನ್ನು ಆಯೋಜಿಸಬೇಕಿದ್ದು , ವಸ್ತುಪ್ರದರ್ಶನದ ಮುಖ್ಯ ವಿಷಯ ಹಾಗೂ ಉಪವಿಷಯಗಳು ಈ ಕೆಳಕಂಡಂತಿವೆ .

**ವಿದ್ಯಾರ್ಥಿಗಳ ವಿಭಾಗ:**

| | |
|---|---|
| ಮುಖ್ಯ ವಿಷಯ: "ರಾಷ್ಟ್ರದ ನಿರ್ಮಾಣಕ್ಕೆ ವಿಜ್ಞಾನ ,ತಂತ್ರಜ್ಞಾನ ಮತ್ತು ಗಣಿತ"<br>**Main Theme: "Science ,Technology and Mathematics for Nation building"** | |
| ಉಪವಿಷಯಗಳು: | |
| 1. ಆರೋಗ್ಯ, | 1. Health |
| 2. ಕೈಗಾರಿಕೆ | 2. Industry |
| 3. ಸಾರಿಗೆ ಮತ್ತು ಸಂಪರ್ಕ | 3. Transport and Communication |
| 4.ಸುಸ್ಥಿರ ಪರಿಸರಕ್ಕಾಗಿ ನವೀಕರಿಸಬಹುದಾದ ಸಂಪನ್ಮೂಲಗಳಲ್ಲಿ ನಾವೀನ್ಯತೆ | 4. Innovation in Renewable resources for sustainable environment |
| 5. ಆಹಾರ ಉತ್ಪಾದನೆಯಲ್ಲಿ ನಾವೀನ್ಯತೆ ಹಾಗೂ ಆಹಾರ ಭದ್ರತೆ | 5. Innovation in Food production and food security |
| 6. ನಿತ್ಯ ಜೀವನಕ್ಕೆ ಗಣಿತದ ಪರಿಹಾರಗಳು | 6. Mathematical solutions for everyday life |

ಹೆಚ್ಚಿನ ವಿವರಗಳು : ವೆಬ್‌ಸೈಟ್ www.ncert.nic.in ನಲ್ಲಿ ಲಭ್ಯವಿದೆ

**ವಸ್ತುಪ್ರದರ್ಶನ ಆಯೋಜನೆಗೆ ಈ ಕೆಳಕಂಡ ಕ್ರಮಗಳನ್ನು ವಹಿಸುವುದು.**

- ಡಯಟ್‌ಗಳ ಪ್ರಾಂಶುಪಾಲರು ತಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳಿಗೆ ವಸ್ತು ಪ್ರದರ್ಶನದ ವಿಷಯ, ಉಪ ವಿಷಯ ಹಾಗೂ ನಿಬಂಧನೆಗಳ ಕುರಿತು ಮಾಹಿತಿಯನ್ನು ನೀಡುವುದು.
- ಉಪನಿರ್ದೇಶಕರು(ಆ) ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ ವ್ಯಾಪಕ ಪ್ರಚಾರಕ್ಕೆ ಕ್ರಮವಹಿಸುವುದು. ಮುಖ್ಯಶಿಕ್ಷಕರ ಸಭೆ, ಶಿಕ್ಷಕರ ಸಭೆಗಳಲ್ಲಿ ತಿಳಿಸುವ ಮೂಲಕ, ಕಛೇರಿಗಳ ನೋಟೀಸ್ ಬೋರ್ಡ್ ಪ್ರಕಟಿಸುವ ಮೂಲಕ, ಉಚಿತವಾಗಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಮಾಹಿತಿ ನೀಡುವುದು.
- ಸರ್ಕಾರಿ , ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಗಳಲ್ಲಿ 8, 9 , 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರದರ್ಶನದಲ್ಲಿ ಭಾಗವಹಿಸಬಹುದು.
- ಪ್ರತಿ ಪ್ರದರ್ಶಿಕೆ/ಮಾದರಿ ನಿಗದಿಪಡಿಸಲಾಗಿರುವ ಉಪ ವಿಷಯವನ್ನು ಆಧರಿಸಿ ತಯಾರಿಸಬೇಕು

- ಒಂದು ಶಾಲೆಯಿಂದ 06 ಉಪವಿಷಯಗಳಲ್ಲಿ ಯಾವುದೇ ಉಪವಿಷಯ/ಉಪವಿಷಯಗಳಿಗೆ ಮಾದರಿ ಸಿದ್ಧಪಡಿಸಿ ಭಾಗವಹಿಸಬಹುದಾಗಿದೆ. ಮಾರ್ಗದರ್ಶಿ ಶಿಕ್ಷಕರು ಶಿಕ್ಷಕರ ವಿಭಾಗದ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

**ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ವಿಭಾಗ:**

ಪ್ರೌಢಶಾಲೆಗಳಲ್ಲಿ ಬೋಧಿಸುತ್ತಿರುವ ವಿಜ್ಞಾನ ಶಿಕ್ಷಕರು ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಟಿ.ಜಿ.ಟಿ., ಶಿಕ್ಷಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ. ಶಿಕ್ಷಕರ ವಿಭಾಗಕ್ಕೆ ಎನ್.ಸಿ.ಇ.ಆರ್.ಟಿ.ಯಿಂದ ಯಾವುದೇ ವಿಷಯ ನಿಗಧಿಯಾಗಿರುವುದಿಲ್ಲ. ಶಿಕ್ಷಕರ ವಿಭಾಗದ ಸ್ಪರ್ಧೆಯು ಜಿಲ್ಲಾ ಹಂತದಿಂದ ದಕ್ಷಿಣ ವಲಯ ಮಟ್ಟದಹಂತದವರೆಗೆ ವಸ್ತುಪ್ರದರ್ಶನ ಆಯೋಜನೆಯಾಗಲಿದ್ದು, ವಿಜ್ಞಾನ/ಗಣಿತಕ್ಕೆ ಸಂಬಂಧಿಸಿದ ಮಾದರಿಗಳನ್ನು ಪ್ರದರ್ಶಿಸಲು ಅವಕಾಶವಿದೆ.
ಶಿಕ್ಷಕರ ವಸ್ತುಪ್ರದರ್ಶನ ನೇರವಾಗಿ ಜಿಲ್ಲೆ ಹಂತದಲ್ಲಿ ಆಯೋಜನೆಯಾಗಲಿದೆ.

**ವಿವಿಧ ಹಂತಗಳಲ್ಲಿ ವಸ್ತುಪ್ರದರ್ಶನ ಆಯೋಜನೆಗೆ ವೇಳಾಪಟ್ಟಿ**

| ಹಂತ | ಅವಧಿ | ಆಯೋಜಕರು |
|---|---|---|
| ಶಾಲಾ ಹಂತ | ಅಕ್ಟೋಬರ್, 2016 ರ ಒಳಗೆ | ಶಾಲಾ ಮುಖ್ಯಸ್ಥರು |
| ತಾಲ್ಲೂಕು ಹಂತ | 15 ನವೆಂಬರ್ 2016ರ ರೊಳಗೆ | ಡಯಟ್‌ನ ಆಯಾ ಬ್ಲಾಕಿನ ನೋಡಲ್ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| ಜಿಲ್ಲಾ ಹಂತ | 10 ಡಿಸೆಂಬರ್, 2016ರೊಳಗೆ | ಡಯಟ್ ಪ್ರಾಂಶುಪಾಲರು ಮತ್ತು ಆಯಾ ಜಿಲ್ಲೆಗಳ ಉಪನಿರ್ದೇಶಕರು (ಆ) |
| ರಾಜ್ಯ ಹಂತ | ಡಿಸೆಂಬರ್ 2016ರ ಮೂರನೇ ವಾರ | ಡಿ.ಎಸ್.ಇ.ಆರ್.ಟಿ., ಬೆಂಗಳೂರು ಮತ್ತು ಆಯ್ದ ಜಿಲ್ಲೆಯ ಡಯಟ್ ಪ್ರಾಂಶುಪಾಲರು |
| ದಕ್ಷಿಣ ವಲಯ ಮಟ್ಟ | 2017 –ಜನವರಿ , | ಪುದುಚೆರಿ |
| ರಾಷ್ಟ್ರ ಹಂತ | ನವೆಂಬರ್/ ಡಿಸೆಂಬರ್ 2017 | ಎನ್.ಸಿ.ಇ.ಆರ್.ಟಿ ಮತ್ತು ಆಯ್ದ ರಾಜ್ಯ ಸರ್ಕಾರ |

**ಶಾಲಾ ಹಂತ:**

- ಶಾಲಾ ಹಂತಕ್ಕೆ ಶಾಲೆಯಲ್ಲಿನ ವಿಜ್ಞಾನ ಶಿಕ್ಷಕರಿಂದ ಮೌಲ್ಯಮಾಪನ ಮಾಡಿಸಿ ಉತ್ತಮ ಮಾದರಿಗಳನ್ನು ಬ್ಲಾಕ್ ಹಂತಕ್ಕೆ ಕಳುಹಿಸುವುದು.
- **ಅನುದಾನ ಬಳಕೆ ಕುರಿತು**–ಶಾಲಾ ಸಂಚಿತ ನಿಧಿ ಇಲ್ಲವೇ ಚಾಲ್ತಿ ಮೊತ್ತದಿಂದ ಈ ಕೆಳಕಂಡ ವೆಚ್ಚ ಭರಿಸಬಹುದಾಗಿದೆ.

i) ಮಾದರಿ ತಯಾರಿಕೆಗೆ : ಶಾಲೆಗೆ ಗರಿಷ್ಠ ರೂ.1500=00 ರ ಮಿತಿಯಲ್ಲಿ .

ii) ಪ್ರಯಾಣ ಭತ್ಯೆ ವೆಚ್ಚ ಭರಿಸಲು: ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು & ಒಬ್ಬರು ಮಾರ್ಗದರ್ಶಿ ಶಿಕ್ಷಕರಿಗೆ ನಿಯಮಾನುಸಾರ ಪ್ರಯಾಣಭತ್ಯೆ (ದಿನಭತ್ಯೆಗೆ ಅವಕಾಶವಿಲ್ಲ)

- ಇದಕ್ಕೆ ಸಂಬಂಧಿಸಿದ ವೋಚರ್‌ಗಳ ನಿರ್ವಹಣೆ ಮುಖ್ಯೋಪಾಧ್ಯಾಯರ ಜವಾಬ್ದಾರಿಯಾಗಿದ್ದು , ತಪಾಸಣೆ ಸಮಯದಲ್ಲಿ ಅಗತ್ಯ ದಾಖಲೆಗಳನ್ನು ಒದಗಿಸುವುದು.

- ವಸ್ತು ಪ್ರದರ್ಶನಲ್ಲಿ ಹೊಸ ಆವಿಷ್ಕಾರಗಳನ್ನು ಮಾತ್ರ ಪ್ರದರ್ಶಿಸಲು ಅವಕಾಶವಿದ್ದು ಯಾವುದೇ ಕಾರಣಕ್ಕೂ ಈಗಾಗಲೇ ಶಾಲೆಯಲ್ಲಿ ಲಭ್ಯವಿರುವ/ ಮಾರುಕಟ್ಟೆಯಲ್ಲಿ ಸಿದ್ಧಪಡಿಸಿರುವ , ಈ ಹಿಂದಿನ ಯಾವುದೇ ಪ್ರದರ್ಶನದಲ್ಲಿ ಪ್ರದರ್ಶಿತವಾಗಿರುವ ಮಾದರಿಗಳನ್ನು (ಇನ್‌ಸ್ಪೈರ್ ಅವಾರ್ಡ್, ಮಕ್ಕಳ ವಿಜ್ಞಾನ ಕಾಂಗ್ರೆಸ್......) ಪ್ರದರ್ಶಿಸುವಂತಿಲ್ಲ ಹಾಗೂ ಇದಕ್ಕೆ ಹಣ ಡ್ರಾ ಮಾಡುವಂತಿಲ್ಲ ( ಒಂದು ವೇಳೆ ಹೀಗಾದಲ್ಲಿ ಅಗತ್ಯ ಶಿಸ್ತಿನ ಕ್ರಮ ವಹಿಸಲಾಗುವುದು.)

**ಬ್ಲಾಕ್ ಹಂತ**

- ಪ್ರತಿ ಉಪವಿಷಯಕ್ಕೆ ಕನಿಷ್ಠ 6 ತಂಡಗಳು (ಒಟ್ಟಾರೆ ಕನಿಷ್ಠ 36 ತಂಡಗಳು/ಮಾದರಿಗಳಿರಬೇಕು)
- ಅನುಬಂಧ-1 ರಲ್ಲಿರುವಂತೆ ರೂ.9000=00 ವೆಚ್ಚ ಬರಿಸಲು ಅನುಮತಿಸಿದೆ.
- ಒಟ್ಟು 6 ತೀರ್ಪುಗಾರರನ್ನು 3 ಗುಂಪುಗಳಲ್ಲಿ ವಿಭಾಗಿಸಿ ಪ್ರತಿ ವಿಭಾಗದಿಂದ(ಇಬ್ಬರ ತಂಡ) 2 ಉಪವಿಷಯಗಳ ಮಾದರಿಗಳನ್ನು ಮೌಲ್ಯಮಾಪನ ಮಾಡಿಸುವುದು.

**ಜಿಲ್ಲಾ ಹಂತ**

- ಪ್ರತಿ ಉಪವಿಷಯಕ್ಕೆ ಕನಿಷ್ಠ 10 ತಂಡಗಳು (ಒಟ್ಟಾರೆ ಕನಿಷ್ಠ 60 ತಂಡಗಳು/ಮಾದರಿಗಳಿರಬೇಕು).
- ಅನುಬಂಧ-2 ರಲ್ಲಿರುವಂತೆ ರೂ.34,000=00 ವೆಚ್ಚ ಬರಿಸಲು ಅನುಮತಿಸಿದೆ.
- ಒಟ್ಟು 6 ತೀರ್ಪುಗಾರರನ್ನು 3 ಗುಂಪುಗಳಲ್ಲಿ ವಿಭಾಗಿಸಿ ಪ್ರತಿ ವಿಭಾಗದಿಂದ(ಇಬ್ಬರ ತಂಡ) 2 ಉಪವಿಷಯಗಳ ಮಾದರಿಗಳನ್ನು ಮೌಲ್ಯಮಾಪನ ಮಾಡಿಸುವುದು. ಶಿಕ್ಷಕರ ವಿಭಾಗದ ಮೌಲ್ಯಮಾಪನವನ್ನು ಈ ತಿರ್ಪುಗಾರರೇ ನಿರ್ವಹಿಸುವುದು.

2016-17ನೇ ಸಾಲಿನಲ್ಲಿಯೂ ಸಹ ರಾಜ್ಯ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಎನ್.ಸಿ.ಇ.ಆರ್.ಟಿ. ಸೂಚನೆಯಂತೆ **"Food Security"**ವಿಷಯದಲ್ಲಿ ವಿಚಾರ ಗೋಷ್ಠಿಯನ್ನು ಏರ್ಪಡಿಸಲು ತಿಳಸಿದೆ. ಶಾಲಾ ಹಂತದಲ್ಲಿಯೂ ಈ ಕುರಿತಂತೆ ಗೋಷ್ಠಿ ಆಯೋಜನೆಯಾಗಬೇಕಿದ್ದು ಈ ಕೆಳಕಂಡ ಅಂಶಗಳನ್ನು ಹೊಂದಿರಬೇಕು.

- ದೇಶದ ಅಭಿವೃದ್ಧಿಯಲ್ಲಿ **"ಆಹಾರ ಭದ್ರತೆ"** ಕುರಿತು ಸಮುದಾಯಕ್ಕೆ ಮನವರಿಕೆ ಮಾಡುವುದು.
- ಪೋಸ್ಟರ್ ಪ್ರದರ್ಶನ ಮತ್ತು ಸ್ಪರ್ಧೆಯನ್ನು ಆಯೋಜಿಸುವುದು/ಈ ಕುರಿತಂತೆ ತಜ್ಞರಿಂದ ಉಪನ್ಯಾಸ ಏರ್ಪಡಿಸುವುದು/ ರಸಪ್ರಶ್ನೆ ಕಾರ್ಯಕ್ರಮ/ಗುಂಪು ಚರ್ಚೆ ಏರ್ಪಡಿಸುವುದು.

Kulasenak

ನಿರ್ದೇಶಕರು (ಪ್ರೌಢ ಶಿಕ್ಷಣ)

ಗೆ,

**ರಾಜ್ಯದ 34 ಡಯಟ್‌ಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕೆ.**

**ಪ್ರತಿಯನ್ನು:-**

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು ರವರ ಮಾಹಿತಿ ಮತ್ತು ಅಗತ್ಯ ಸಹಕಾರಕ್ಕೆ
2. ರಾಜ್ಯದ ಎಲ್ಲಾ ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಅಗತ್ಯ ಕ್ರಮಕ್ಕಾಗಿ
3. ಸಂಯೋಜಕರು, ವಿ.ಐ.ಟಿ.ಎಂ. ಅಂಚೆ ಪೆಟ್ಟಿಗೆ ಸಂಖ್ಯೆ: 5216, ಕಸ್ತೂರಬಾ ರಸ್ತೆ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ.

<u>ಅನುಬಂಧ-1</u>

<u>ಬ್ಲಾಕ್ ಹಂತದ ಕಾರ್ಯಕ್ರಮಕ್ಕೆ ವೆಚ್ಚದ ವಿವರ</u>

| ಕ್ರ.ಸಂ | ವಿವರ | ಮೊತ್ತ | ಒಟ್ಟು ಮೊತ್ತ |
|---|---|---|---|
| 1 | **ಬಹುಮಾನ ವಿದ್ಯಾರ್ಥಿಗಳಿಗೆ** ಪ್ರಥಮ ಬಹುಮಾನ | ರೂ. 200 X 6= 1200 | **ರೂ. 2850=00** |
| | ದ್ವಿತೀಯ ಬಹುಮಾನ | ರೂ. 150 X 6= 900 | |
| | ತೃತೀಯ ಬಹುಮಾನ | ರೂ. 125 X 6= 750 | |
| | | **ಒಟ್ಟು** ರೂ. 2850-00 | |
| 2 | **ತೀರ್ಪುಗಾರರ ಸಂಭಾವನೆ** | ರೂ. 300 X 6= 1800 | **ರೂ. 1800=00** |
| 3 | ಲಘು ಉಪಹಾರ, ಕಾಫೀ, ಟೀ. ಹಾಗೂ ಆಯೋಜನಾ ವೆಚ್ಚ | **ರೂ 4350 =00** | **ರೂ. 4350=00** |
| | | | **ರೂ. 9000=00** |

<u>ಅನುಬಂಧ-2</u>

<u>ಜಿಲ್ಲಾ ಹಂತದ ಕಾರ್ಯಕ್ರಮಕ್ಕೆ ವೆಚ್ಚದ ವಿವರ</u>

| ಕ್ರ.ಸಂ | ವಿವರ | ಮೊತ್ತ | ಒಟ್ಟು ಮೊತ್ತ |
|---|---|---|---|
| 1 | **ಬಹುಮಾನ ವಿದ್ಯಾರ್ಥಿಗಳಿಗೆ** ಪ್ರಥಮ ಬಹುಮಾನ | ರೂ. 500 X 6= 3000 | **ರೂ. 8400=00** |
| | ದ್ವಿತೀಯ ಬಹುಮಾನ | ರೂ. 400 X 6= 2400 | |
| | ತೃತೀಯ ಬಹುಮಾನ | ರೂ. 300X 6 = 1800 | |
| | | **ಒಟ್ಟು** ರೂ. 7200-00 | |
| | **ಬಹುಮಾನ ಶಿಕ್ಷಕರ ವಿಭಾಗ** ಪ್ರಥಮ ಬಹುಮಾನ | ರೂ. 500 X 1= 500 | |
| | ದ್ವಿತೀಯ ಬಹುಮಾನ | ರೂ. 400 X 1= 400 | |
| | ತೃತೀಯ ಬಹುಮಾನ | ರೂ. 300X 1 = 300 | |
| | | **ಒಟ್ಟು** ರೂ. 1200-00 | |
| 2 | **ತೀರ್ಪುಗಾರರ ಸಂಭಾವನೆ** | ರೂ. 600 X 6= 1800 | **ರೂ. 3600=00** |
| 3 | ಸ್ಪರ್ಧಿಗಳಿಗೆ ಮತ್ತು ಶಿಕ್ಷಕರ ವಿಭಾಗದ ಶಿಕ್ಷಕರಿಗೆ ಕನಿಷ್ಟ ಪ್ರಯಾಣ ಭತ್ಯೆ ಮಾತ್ರ. ಲಘು ಉಪಹಾರ, ಕಾಫೀ, ಟೀ. ಹಾಗೂ ಆಯೋಜನಾ ವೆಚ್ಚ | **ರೂ 22,000=00** | **ರೂ. 22000=00** |
| | | | **ರೂ. 34,000=00** |